ಕರ್ನಾಟಕ ವಿಧಾನ ಪರಿಷತ್ತು

01.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1504
02.	ಸದಸ್ಯರ ಹೆಸರು	:	ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
03.	ಉತ್ತರಿಸುವ ದಿನಾಂಕ	:	19.03.2020
04.	ಉತ್ತರಿಸುವ ಸಚಿವರು	:	ಗೃಹ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಕೆ.ಎಸ್.ಆರ್.ಪಿ., ಸಿ.ಎ.ಆರ್. ಮತ್ತು ಡಿ.ಎ.ಆರ್. ಕಾನ್ಸ್‌ಟೇಬಲ್‌ಗಳು ಸಿವಿಲ್ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗೆ ಹೋಗಲು ಅವಕಾಶ ಇದೆಯೇ; ಇದ್ದಲ್ಲಿ, ಅದಕ್ಕಿರುವ ಅರ್ಹತೆಗಳೇನು;	ಹೌದು. ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಸಿವಿಲ್ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗೆ ಶೈಕ್ಷಣಿಕವಾಗಿ ಪಿ.ಯು.ಸಿ. ಮತ್ತು ತತ್ಸಮಾನ ವಿದ್ಯಾರ್ಹತೆ ಹೊಂದಿ, ಅರ್ಹರಿರುವ ಸೇವಾ ನಿರತ ಸಿಬ್ಬಂದಿಗಳು ನೇಮಕಾತಿ ಪ್ರಾಧಿಕಾರಿಗಳ ಅನುಮತಿಯ ಮೇರೆಗೆ ಸಿ.ಪಿ.ಸಿ. ಹುದ್ದೆಗೆ ಹೋಗಲು ಅವಕಾಶವಿದೆ.
ಆ)	2015ರಿಂದ ಇಲ್ಲಿಯವರೆಗೆ ಕೆ.ಎಸ್.ಆರ್.ಪಿ., ಸಿ.ಎ.ಆರ್. ಮತ್ತು ಡಿ.ಎ.ಆರ್. ಕಾನ್ಸ್‌ಟೇಬಲ್‌ಗಳಲ್ಲಿ ಎಷ್ಟು ಜನರು ನಾಗರೀಕ ಸಿವಿಲ್ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗೆ ಆಯ್ಕೆಯಾಗಿದ್ದಾರೆ; (ಮಾಹಿತಿ ನೀಡುವುದು)	2015 ರಿಂದ ಇಲ್ಲಿಯವರೆಗೆ ಕೆ.ಎಸ್.ಆರ್.ಪಿ. ಮತ್ತು ಸಿ.ಎ.ಆರ್. ಮತ್ತು ಡಿ.ಎ.ಆರ್. ಕಾನ್ಸ್‌ಟೇಬಲ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಸಿಬ್ಬಂದಿಗಳು ನಾಗರೀಕ (ಸಿವಿಲ್) ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗೆ ಆಯ್ಕೆಯಾಗಿರುವ ವಿವರ ಈ ಕೆಳಕಂಡಂತಿದೆ.

ಕ್ರ ಸಂ	ಹುದ್ದೆ	ಸಂಖ್ಯೆ
1)	ಕೆ.ಎಸ್.ಆರ್.ಪಿ.	585
2)	ಸಿ.ಎ.ಆರ್. / ಡಿ.ಎ.ಆರ್.	1067
	ಒಟ್ಟು	1652

ಕ್ರ. ಸಂ	ಪ್ರಶ್ನೆ	ಉತ್ತರ
ಇ)	ಈ ರೀತಿ ಕಾನ್ಸ್‌ಟೇಬಲ್‌ಗಳು ಸಿವಿಲ್ ಕಾನ್ಸ್‌ಟೇಬಲ್ ಆಗಿ ಹೋಗುವುದರಿಂದ ಕೆ.ಎಸ್.ಆರ್.ಪಿ., ಸಿ.ಎ.ಆರ್. ಮತ್ತು ಡಿ.ಎ.ಆರ್. ಕಾನ್ಸ್‌ಟೇಬಲ್‌ಗಳ ಹುದ್ದೆ ಖಾಲಿಯಾಗಿ ಸಿಬ್ಬಂದಿಗಳ ಕೊರತೆಯುಂಟಾಗುವುದಿಲ್ಲವೆ;	ಈ ರೀತಿ ಹುದ್ದೆ ತ್ಯಜಿಸಿ ಹೋದ ಅಭ್ಯರ್ಥಿಗಳಿಂದ ಉಂಟಾಗುವ ರಿಕ್ತಸ್ಥಾನಗಳನ್ನು ಮುಂದಿನ ನೇಮಕಾತಿ ಪ್ರಕ್ರಿಯೆಯಲ್ಲಿ ಪರಿಗಣಿಸಿ ನೇರ ನೇಮಕಾತಿ ಮೂಲಕ ರಿಕ್ತ ಸ್ಥಾನಗಳನ್ನು ಭರ್ತಿ ಮಾಡಲಾಗುವುದರಿಂದ ಸಿಬ್ಬಂದಿಗಳ ಕೊರತೆ ಉಂಟಾಗುವುದಿಲ್ಲ.
ಈ)	ಎಲ್ಲಾ ವಿಭಾಗಗಳ ಪೊಲೀಸ್ ಕಾನ್ಸ್‌ಟೇಬಲ್‌ಗಳ ಹುದ್ದೆಗಳಿಗೂ ಏಕರೂಪವಾದ ವಿದ್ಯಾರ್ಹತೆ ನಿಗದಿಗೊಳಿಸಿ ನೇಮಕಾತಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?	ಸರ್ಕಾರದ ಮುಂದೆ ಈ ಕುರಿತು ಪ್ರಸ್ತಾವನೆ ಇರುವುದಿಲ್ಲ

HD/25/PPA/2020-PS_B

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು